ಇ. ಇಲ್ಲ

ಈ. 8,27,831

ಉ. ಇಲ್ಲ

ಉದ್ಯಮಗಳ ಮಾಲಿನ್ಯ ತಡೆಗಟ್ಟಲು ತೆಗೆದುಕೊಂಡ ಕ್ರಮಗಳು

507 (350): ಶ್ರೀ ಆರ್. ದಯಾನಂದ್‌ರಾವ್ (ಗಾಂಧಿನಗರ)

ಮಾನ್ಯ ವಿಜ್ಞಾನ, ತಂತ್ರಜ್ಞಾನ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಪರಿಸರ ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಎಷ್ಟು ಮಾಲಿನ್ಯಕಾರಕ ಉದ್ದಿಮೆಗಳನ್ನು ಬೆಂಗಳೂರು ನಗರದಲ್ಲಿ ಪತ್ತೆ ಹಚ್ಚಲಾಗಿದೆ ?

2. ಈ ಉದ್ದಿಮೆಗಳಿಗೆ ಮಾಲಿನ್ಯ ತಡೆಗಟ್ಟಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

3. ಎಷ್ಟು ಉದ್ದಿಮೆಗಳಿಗೆ ಕಾನೂನು ರೀತ್ಯಾ ಮಾಲಿನ್ಯ ತಡೆಗಟ್ಟಲು ನೋಟಿಸು ಕೊಡಲಾಗಿದೆ ?

4. ಎಷ್ಟು ಹೆಚ್ಚು ಮಾಲಿನ್ಯಕಾರಕ ಉದ್ದಿಮೆಗಳನ್ನು ಮುಚ್ಚಿಸಲಾಗಿದೆ ?

ಶ್ರೀ ಎನ್. ಜಿ. ಹಾಲಪ್ಪ (ವಿಜ್ಞಾನ ಮತ್ತು ತಂತ್ರಕಲೆ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿ ರಾಜ್ಯ ಸಚಿವರು):-

1. ಒಟ್ಟು 664.

2. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974 ಮತ್ತು (ವಾಯು ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ), 1981 ಕಾಯ್ದೆಗಳನ್ನು ಜಾರಿಗೊಳಿಸುತ್ತಿದೆ. ಈ ಉದ್ದಿಮೆಗಳು ಸೂಕ್ತ ಜಲ ಶುದ್ಧೀಕರಣ ಘಟಕಗಳನ್ನು ಮತ್ತು ವಾಯು ಮಾಲಿನ್ಯ ನಿಯಂತ್ರಣ ಘಟಕಗಳನ್ನು ಅಳವಡಿಸಿ ಹೊಗೆ ಮತ್ತು ಕಲುಷಿತ ನೀರನ್ನು ಮಂಡಳಿಯು ನಿಗದಿಪಡಿಸಿರುವ ಗುಣ ಮಾನಕಗಳಿಗೆ ಶುದ್ಧೀಕರಿಸುವಂತೆ ಒತ್ತಾಯಿಸುತ್ತಿದೆ. ಬೆಂಗಳೂರು ನಗರದಲ್ಲಿ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) 1974 ಕಾಯ್ದೆಗಳನ್ನು ಉಲ್ಲಂಘಿಸಿದ ಕಾರಣ ಒಂದು ಕಾರ್ಖಾನೆಯ ವಿರುದ್ಧ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಲಾಗಿದೆ. ಹಾಗೂ ಎರಡು ಅತಿ ಮಾಲಿನ್ಯಕಾರಕ ಉದ್ದಿಮೆಗಳನ್ನು ಮುಚ್ಚಲು ಪಕ್ಕ ಆದೇಶ ನೀಡಲಾಗಿದೆ.

3. ಗುರುತಿಸಲಾದ ಎಲ್ಲಾ ಮಾಲಿನ್ಯಕಾರಕ ಕಾರ್ಖಾನೆಗಳಿಗೆ ನೋಟೀಸನ್ನು ನೀಡಲಾಗಿದ್ದು ಅವುಗಳು ಜಲ ಮತ್ತು ವಾಯು ಮಾಲಿನ್ಯ ನಿಯಂತ್ರಣ ಕಾಯ್ದೆಗಳನ್ವಯ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಲಾಗುತ್ತಿದೆ.

4. ಎರಡು.

ಹೊಸ ಪೋಲೀಸ್ ಠಾಣೆಗಳು ಮತ್ತು ಇದರ ಸಿಬ್ಬಂದಿ ವರ್ಗ.

509 (900): ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್‌ಕಲ್)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?